ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

Karnataka State Road Transport Corporation

**ADMINISTRATION DEPARTMENT ಆಡಳಿತ ಇಲಾಖೆ**

Recruitment Section **(ನೇಮಕ ಶಾಖೆ)**

ಸಂಖ್ಯೆ: ಕರಾಸಾ/ಕೇಕ/ನೇಮಕ/ಜಿ 1/ 63 /2022-23 ದಿನಾಂಕ : 17 -05-2022

## ಪ್ರಕಟಣೆ

ವಿಷಯ : ನಿಗಮದ ನಿವೃತ್ತ ಚಾಲಕರ ಸೇವೆಯನ್ನು ತಾತ್ಕಾಲಿಕ ಆಧಾರದ ಮೇಲೆ ಪಡೆಯುವ ಕುರಿತು.

-----

ಕೋವಿಡ್ -19 ಪೂರ್ವದಲ್ಲಿ ನಿಗಮವು ಸುಮಾರು 8000 ಅನುಸೂಚಿಗಳೊಂದಿಗೆ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿತ್ತು. ಆದರೆ ಕೋವಿಡ್ ಸಮಯದಲ್ಲಿ ಅನುಸೂಚಿಗಳ ಕಾರ್ಯಾಚರಣೆಯನ್ನು ಕಡಿಮೆ ಮಾಡಿ ನಂತರ ಪರಿಸ್ಥಿತಿ ಸುಧಾರಣೆಗೊಂಡಂತೆ ಅನುಸೂಚಿಗಳ ಸಂಖ್ಯೆಯನ್ನು ಏರಿಕೆ ಮಾಡಲಾಗಿದೆ. ಪ್ರಸ್ತುತ ಜನಸಂದಣಿ ಸಹಜ ಸ್ಥಿತಿಗೆ ಬಂದ ಹಿನ್ನಲೆಯಲ್ಲಿ ಜನದಟ್ಟಣೆಗೆ ಅನುಗುಣವಾಗಿ ಕಾರ್ಯಾಚರಣೆ ಮಾಡಲು ಚಾಲನಾ ಸಿಬ್ಬಂದಿಯ ಕೊರತೆ ಉಂಟಾಗಿರುತ್ತದೆ. ಮುಂದುವರೆದು ನಿಗಮದ ಆರ್ಥಿಕ ಪರಿಸ್ಥಿತಿ ಕ್ಲಿಷ್ಟಕರವಾಗಿರುವುದರಿಂದ ಚಾಲ್ತಿಯಲ್ಲಿರುವ ಚಾಲನಾ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ.

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಜನದಟ್ಟಣೆ ಅವಧಿಯಲ್ಲಿ ಸಾರ್ವಜನಿಕ ಪ್ರಯಾಣಿಕರ ಅಗತ್ಯಕ್ಕನುಗುಣವಾಗಿ ಸಮರ್ಪಕ ಸಾರಿಗೆ ಸೌಲಭ್ಯ ಒದಗಿಸಲು ಕಳೆದ ಮೂರು ವರ್ಷಗಳಲ್ಲಿ ನಾಲ್ಕೂ ನಿಗಮಗಳಲ್ಲಿ ನಿವೃತ್ತಿ ಹೊಂದಿ 63 ವರ್ಷ ವಯೋಮಿತಿ ಮೀರದ ಚಾಲಕರನ್ನು ಮೂರು ತಿಂಗಳ ಅವಧಿಗೆ ನಿಗಮದಲ್ಲಿ ತಾತ್ಕಾಲಿಕ ಆಧಾರದ ಮೇಲೆ 'ಚಾಲಕ'ರನ್ನಾಗಿ ಉಪಯೋಗಿಸಿಕೊಳ್ಳಲು ಉದ್ದೇಶಿಸಲಾಗಿರುತ್ತದೆ.

ಈ ಕೆಳಕಂಡ ಷರತ್ತುಗಳನ್ನು ಒಪ್ಪಿ ಕರ್ತವ್ಯ ನಿರ್ವಹಿಸಲು ಆಸಕ್ತಿ ಇರುವ ನಿವೃತ್ತ ಚಾಲಕರು ಸೂಕ್ತದಾಖಲೆಗಳೊಂದಿಗೆ ಕೂಡಲೇ ವಿಭಾಗೀಯ ನಿಯಂತ್ರಣಾಧಿಕಾರಿ, ಪುತ್ತೂರು/ ರಾಮನಗರ/ಚಾಮರಾಜನಗರ/ಮಂಗಳೂರು ವಿಭಾಗಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಷರತ್ತು ಮತ್ತು ನಿಬಂಧನೆಗಳು :

1. ದೈಹಿಕವಾಗಿ ಚಾಲನಾ ವೃತ್ತಿ ನಿರ್ವಹಿಸಲು ಸಮರ್ಥರಿರುವ ಹಾಗೂ ದೃಷ್ಟಿಸಾಮರ್ಥ್ಯ ಹೊಂದಿರುವ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರು ಪಡಿಸುವುದು.
2. ಪ್ರಸ್ತುತ ಚಾಲ್ತಿಯಲ್ಲಿರುವ ಭಾರಿ ವಾಹನ ಚಾಲನಾ ಪರವಾನಗಿ ಹೊಂದಿರುವುದು ಕಡ್ಡಾಯವಾಗಿರುತ್ತದೆ.

----2

Scanned by CamScanner

3. ತಾತ್ಕಾಲಿಕ ಆಧಾರದ ಮೇಲೆ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಚಾಲಕರಿಗೆ ಕರ್ತವ್ಯ ನಿರ್ವಹಿಸಿದ ಪ್ರತಿ ದಿನದ 08 ಗಂಟೆಗಳ ಚಾಲನಾ ಅವಧಿಗೆ (Steering Hours) ರೂ.1000/-ಗಳ (ಒಂದು ಸಾವಿರ) ಗೌರವ ಧನ ಪಾವತಿಸಲಾಗುತ್ತದೆ. ಮುಂದುವರೆದು, 08 ಗಂಟೆಗಳ (Steering Hours) ನಂತರದಲ್ಲಿನ ಕರ್ತವ್ಯಕ್ಕೆ ಪ್ರತಿ ಗಂಟೆಗೆ ರೂ.125/-(ಒಂದು ನೂರು ಇಪ್ಪತ್ತೈದು) ಹೆಚ್ಚುವರಿ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಇದನ್ನು ಹೊರತುಪಡಿಸಿ ಬೇರೆ ಯಾವುದೇ ಭತ್ಯೆ/ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
4. ಸಾರಿಗೆ ಆಧಾಯದ ಮೇಲೆ ಶೇಕಡ 01 ರಂತೆ ಪ್ರೋತ್ಸಾಹಧನಕ್ಕೆ ಅರ್ಹರಿರುತ್ತಾರೆ.
5. ಒಪ್ಪಂದದ ಅವಧಿಯು ಸೇವಾವಧಿಯ ವಿಸ್ತರಣೆ / ಮರು ನೇಮಕವಲ್ಲ.
6. ಸದರಿ ಚಾಲಕರನ್ನು ಸಂಸ್ಥೆಯು ಯಾವುದೇ ಸೂಚನೆ ನೀಡದೆ ಕರ್ತವ್ಯದಿಂದ ಬಿಡುಗಡೆಗೊಳಸಬಹುದಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು :

1. ಮಾನ್ಯ ಅಧ್ಯಕ್ಷರು, ಕ ರಾ ರ ಸಾ ನಿಗಮ, ಕೇಂದ್ರ ಕಚೇರಿ ರವರ ಮಾಹಿತಿಗಾಗಿ.
2. ಮಾನ್ಯ ಉಪಾಧ್ಯಕ್ಷರು, ಕ ರಾ ರ ಸಾ ನಿಗಮ, ಕೇಂದ್ರ ಕಚೇರಿ ರವರ ಮಾಹಿತಿಗಾಗಿ.
3. ಮಾನ್ಯ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಮಾಹಿತಿಗಾಗಿ.
4. ವ್ಯವಸ್ಥಪಕ ನಿರ್ದೇಶಕರು, ಬೆಂಮನಸಾಸಂಸ್ಥೆ, ವಾಕರಸಾಸಂಸ್ಥೆ, ಕಕರಸಾಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಈ ವಿಷಯವನ್ನು ನಿವೃತ್ತ ಚಾಲನಾ ಸಿಬ್ಬಂದಿಯ ಗಮನಕ್ಕೆ ತರಲು ಕೋರಲಾಗಿದೆ.
5. ಎಲ್ಲಾ ಇಲಾಖಾ ಮುಖ್ಯಸ್ಥರು / ಉಸ್ತುವಾರಿ ಅಧಿಕಾರಿಗಳು ಕ ರಾ ರ ಸಾ ನಿಗಮ, ಕೇಂದ್ರ ಕಚೇರಿ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ಹಿರಿಯ / ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ ರಾ ರ ಸಾ ನಿಗಮ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

Scanned by CamScanner

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
Karnataka State Road Transport Corporation
ADMINISTRATION DEPARTMENT ಆಡಳಿತ ಇಲಾಖೆ
Recruitment Section (ನೇಮಕ ಶಾಖೆ)

ಸಂಖ್ಯೆ: ಕರಾಸಾ/ಕೇಕ/ನೇಮಕ/ಜಿ 1/65 /2022-23 ದಿನಾಂಕ : 19-05-2022

ಹಿರಿಯ / ವಿಭಾಗೀಯ ನಿಯಂತ್ರಣಾಧಿಕಾರಿ,
ಕ ರಾ ರ ಸಾ ನಿಗಮ,
ಹಾಸನ/ಕೋಲಾರ/ ಚಿಕ್ಕಬಳ್ಳಾಪುರ/ ತುಮಕೂರು,
ಚಿತ್ರದುರ್ಗ/ಮೈಸೂರು/ದಾವಣಗೆರೆ/ಶಿವಮೊಗ್ಗ
ಬೆಂಗಳೂರು ಕೇಂದ್ರೀಯ/ ಚಿಕ್ಕಮಗಳೂರು/ಮಂಡ್ಯ.

ವಿಷಯ : ಕ ರಾ ರ ಸಾ ನಿಗಮದಲ್ಲಿ ನಿವೃತ್ತ ಚಾಲಕರ ಸೇವೆಯನ್ನು ತಾತ್ಕಾಲಿಕ ಆಧಾರದ ಮೇಲೆ ಪಡೆಯುವ ಕುರಿತು.

ಉಲ್ಲೇಖ : ಕರಾಸಾ/ಕೇಕ/ನೇಮಕ/ಜಿ1/63/2022-23 ದಿ: 17-05-2022

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಹಾಗೂ ಜನದಟ್ಟಣೆಗೆ ಅನುಗುಣವಾಗಿ ಅನುಸೂಚಿ ಕಾರ್ಯಚರಣೆಗೆ ಚಾಲನಾ ಸಿಬ್ಬಂದಿಗಳ ಕೊರತೆ ಇರುವ ಕಾರಣ ನಿವೃತ್ತ ಚಾಲಕರನ್ನು ತಾತ್ಕಾಲಿಕವಾಗಿ ಮೂರು ತಿಂಗಳ ಅವಧಿಗೆ ಪಡೆಯಲು ಉಲ್ಲೇಖದನ್ವಯ ಪುತ್ತೂರು / ರಾಮನಗರ / ಚಾಮರಾಜನಗರ / ಮಂಗಳೂರು ವಿಭಾಗಗಳಿಗೆ ಅನುಮತಿ ನೀಡಲಾಗಿರುತ್ತದೆ.

ಮುಂದುವರೆದು, ಇತರೆ ವಿಭಾಗಗಳಲ್ಲೂ ಸಹ ದೈನಂದಿನ ಸಾರಿಗೆ ಆದಾಯ ವೃದ್ಧಿಪಡಿಸುವ ಷರತ್ತಿಗೊಳಪಟ್ಟು ಚಾಲನಾ ಸಿಬ್ಬಂದಿಗಳ ಕೊರತೆಗೆ ಅನುಗುಣವಾಗಿ ನಿವೃತ್ತ ಚಾಲಕರ ಸೇವೆಯನ್ನು ತಾತ್ಕಾಲಿಕವಾಗಿ ಉಲ್ಲೇಖಿತ ಪ್ರಕಟಣೆಯಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಪಡೆಯಲು ಹಾಗೂ ವಿಭಾಗಗಳಲ್ಲಿ ವರದಿ ಮಾಡಿಕೊಳ್ಳುವ ನಿವೃತ್ತ ಚಾಲಕರುಗಳಿಗೆ ಸಮವಸ್ತ್ರದ ವೆಚ್ಚ ರೂ. 1,000/- ವನ್ನು ವಿಭಾಗದಿಂದ ಭರಿಸಲು ಈ ಮೂಲಕ ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು :

1. ಮಾನ್ಯ ಅಧ್ಯಕ್ಷರು, ಕ ರಾ ರ ಸಾ ನಿಗಮ, ಕೇಂದ್ರ ಕಚೇರಿ ರವರ ಮಾಹಿತಿಗಾಗಿ.
2. ಮಾನ್ಯ ಉಪಾಧ್ಯಕ್ಷರು, ಕ ರಾ ರ ಸಾ ನಿಗಮ, ಕೇಂದ್ರ ಕಚೇರಿ ರವರ ಮಾಹಿತಿಗಾಗಿ.
3. ಮಾನ್ಯ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಮಾಹಿತಿಗಾಗಿ.

Scanned by CamScanner

4. ವ್ಯವಸ್ಥಾಪಕ ನಿರ್ದೇಶಕರು, ಬೆಂಮನಸಾಸಂಸ್ಥೆ, ವಾಕರಸಾಸಂಸ್ಥೆ, ಕಕರಸಾಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಈ ವಿಷಯವನ್ನು ನಿವೃತ್ತ ಚಾಲನಾ ಸಿಬ್ಬಂದಿಯ ಗಮನಕ್ಕೆ ತರಲು ಕೋರಲಾಗಿದೆ.
5. ಎಲ್ಲಾ ಇಲಾಖಾ ಮುಖ್ಯಸ್ಥರು / ಉಸ್ತುವಾರಿ ಅಧಿಕಾರಿಗಳು ಕ ರಾ ರ ಸಾ ನಿಗಮ, ಕೇಂದ್ರ ಕಚೇರಿ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ಹಿರಿಯ / ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ ರಾ ರ ಸಾ ನಿಗಮ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

Scanned by CamScanner